1.
2. .

**ಸಾಕ್ಷಿದಾರರನ್ನು ಪುನಃ ಕರೆಯಿಸಿ ದಿನಾಂಕಃ 29.10.2025 ರಂದು ಪ್ರಮಾಣವಚನ ಬೋಧಿಸಲಾಯಿತು**

**ಮುಂದುವರೆದ ಪಾಟೀ ಸವಾಲುಃ ಆರೋಪಿ ಪರ ಶ್ರೀ ಎಸ್.ಆರ್ ವಕೀಲರಿಂದ:**

3. ನನ್ನ ಮಗನನ್ನು ಜೈಲಿನಿಂದ ಬಿಡಿಸಲು ನಾನು ಸಾಲ ಮಾಡಿರುತ್ತೇನೆ. ನನ್ನ ಮಗ ಬಿಡುಗಡೆಯಾದ ಮೇಲೆ ಆತನಿಗಾಗಿ ನಾನು ಸಾಲ ಮಾಡಿರುತ್ತೇನೆಂದು ಆತನ ಜೊತೆ ಜಗಳ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಆ ಕಾರಣದಿಂದ ಪಂಚಾಯಿತಿ ಸಹಾ ಮಾಡಿಸಿರುತ್ತೇನೆ ಎಂದರೆ ಸರಿಯಲ್ಲ. ಆದಕಾರಣ ನನ್ನ ಮಗ ಚಾಸಾ- 1 ರವರು 1ನೇ ಆರೋಪಿಯಿಂದ ರೂ.25,000/- ಹಣವನ್ನು ಸಾಲ ಪಡೆದುಕೊಂಡು ನನಗೆ

ನೀಡಿರುತ್ತಾನೆ ಎಂದರೆ ಸರಿಯಲ್ಲ. ಚಾಸಾ- 1 ರವರ ಬಳಿ ಅವರು ಯಾವಗಲಾದರೂ ಅಭಿಶೇಕ್ ಬಾರ್ ಬಳಿ ಹೋಗಿದ್ದನೇನೆಂದು ಕೇಳಿರುತ್ತೇನೆ. ಆ ಸಮಯ ಚಾಸಾ- 1 ಬಾರಿನ ಬಳಿ 1ನೇ ಬ್ಲಾಕ್‌ನ ನಿವಾಸಿಗಳಾದ 4 ಜನರು ಅಲ್ಲಿ ಇದ್ದರು ಎಂದು ಹೇಳಿದ್ದ ಅವರ ಹೆಸರು ನನಗೆ ಹೇಳಲು ಬರುವುದಿಲ್ಲ. ಈ ವಿಚಾರವನ್ನು ನಾನು ಎಲ್ಲಿಯೂ ಹೇಳಿರುವುದಿಲ್ಲ. ದೂರು ಕೊಡುವುದು ಬೇಡ ಎಂದು ಗ್ರಾಮಸ್ಥರು ಯಾರು ಹೇಳಿರುವುದಿಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಗ್ರಾಮಸ್ಥರು ದೂರು ಕೊಡುವುದು ಬೇಡ ನ್ಯಾಯಾ ಪಂಚಾಯಿತಿ ಮಾಡೋಣ ಎಂದು ಹೇಳಿದ್ದರು ಎಂದು ನಾನು ಹೇಳಿದ್ದು ಈ ರೀತಿ ಹೇಳಬೇಕೆಂದು ನನಗೆ ಯಾರು ಹೇಳಿಕೊಟ್ಟಿರುವುದಿಲ್ಲ.

4. ನಮ್ಮ ಊರಿನ ಯಜಮಾನರು ಆನಂದಯ್ಯ ಎನ್ನುವವರು. ನಮ್ಮ ಊರಿನ ಯಜಮಾನರಿಗೆ ಈ ಘಟನೆಯ ಗಲಾಟೆಯ ಬಗ್ಗೆ ಹೇಳಿರುವುದಿಲ್ಲ. ನನಗೆ ಹೇಳುವುದಕ್ಕೆ ಏನು ತೊಂದರೆ ಇರಲಿಲ್ಲ. ಸಿದ್ದೇಗೌಡನೊಡ್ಡಿಯ ಮಾರಗೌಡನಹಳ್ಳಿ ರಸ್ತೆಯ ಕಾರ್ನರಿನಲ್ಲಿರುವುದು ಅಭಿಶೇಕ್ ಬಾರ್. ಅದು ತುಂಬಾ ಜನಸಂದಣಿ ಇರುವ ಸ್ದಳ ಎಂದರೆ ಸರಿ. ನಮ್ಮ ಕಾಲೋನಿಯ 1ನೇ ಬ್ಲಾಕ್ ನ ಹುಡುಗರು ನಮ್ಮ ಜನಾಂಗದವರು. ನಮ್ಮ ಜನಾಂಗದ ಹುಡುಗರಲ್ಲದೆ ಬೇರೆಯವರು ಅಲ್ಲಿ ಇದ್ದರ ಎಂದು ನಾನು ವಿಚಾರಿಸಿರುವುದಿಲ್ಲ. ಅಂಬೇಡ್ಕರ್ ಭವನದ ಅಕ್ಕಪಕ್ಕ ಇರುವವರು ಎಲ್ಲರು ನನ್ನ ಸಂಬಂದಿಕರು ಮತ್ತು ನನ್ನ ಜನಾಂಗದವರು. ಚಾಸಾ- 1 ರವರು ಅಭಿಶೇಕ್ ಬಾರ್ ಬಳಿ ಈ ನ್ಯಾಯಾಲಯದ ಮುಂದಿರುವ ಆರೋಪಿತರು ನಮ್ಮ ಸರಿಸಮಾನಕ್ಕೆ ಬರುತ್ತಿದ್ದೀಯಾ, ನೀನು ಹೊಲಯರವನು, ನಮ್ಮ ಸಮಾನಕ್ಕೆ ಯಾಕೆ ಬರುತ್ತೀಯ ಎಂದು ಕೇಳಿ ಹಣಕೇಳಿದರು ನನ್ನ ಬಳಿ ಹಣ ಇರಲಿಲ್ಲ ನಂತರ ಗಲಾಟೆಯಾಯಿತು ಎಂದು ಹೇಳಿದ. ಅಭಿಶೇಕ್ ಬಾರ್ ನಾನು ನೋಡಿರುತ್ತೇನೆ. ಬಾರಿನ ಕೌಂಟರ್ ಪಂಚೇಗೌಡನದೊಡ್ಡಿಯ ಕಡೆಗಾದಂತೆ ಇದೆ, ಒಳಗೆ ಕುಳಿತು ಕುಡಿಯುವ ಸ್ದಳ ಕೌಂಟರಿನ ಗೊಡೆಯ ನಂತರದಲ್ಲಿ ಇದೆ. ಕೌಂಟರಿನ ಬಳಿ ಹೋದರೆ ಒಳಗೆ ರೆಸ್ಟೋರೆಂಟಿನಲ್ಲಿ ಯಾರು ಇರುತ್ತಾರೆ ಎಂದು ಗೊತ್ತಾಗುವುದಿಲ್ಲ ಎಂದರೆ ಸರಿಯಲ್ಲ.

5. ನಮ್ಮ ಮನೆಯ ಅಕ್ಕ ಪಕ್ಕ ಎಲ್ಲಾ ಜನಾಂಗದ ಜನರು ಇದ್ದಾರೆ. ನಮ್ಮ ಮನೆಯ ಎರಡು ಮನೆ ನಂತರ ಸ್ಕೂಲುಗಳು ಕಾಲೇಜುಗಳು ಇವೆ. ನಮ್ಮ ಮನೆಯ ಬಳಿ ಕೂಗಾಡಿದರೆ ಅಕ್ಕ ಪಕ್ಕದ ಮನೆಯವರಿಗೆ ಕೇಳಿಸುತ್ತದೆ, ಪಂಚೇಗೌಡನದೊಡ್ಡಿಗೆ ಹಾದು ಹೋಗುವ ರಸ್ತೆಗೆ, ಸಿದ್ದೇಗೌಡನ ದೊಡ್ಡಿಯಿಂದ ಹಾದುಹೋಗುವ ರಸ್ತೆಗೆ ಕೇಳಿಸುತ್ತದೆ ಎಂದರೆ ಸರಿಯಲ್ಲ. ನಮ್ಮ ಮನೆಯ ಬಳಿ ಜೋರಾಗಿ ಕೂಗಾಡಿದರೆ ಈ ಎಲ್ಲಾ ರಸ್ತೆಯಲ್ಲಿ ಓಡಾಡುವ ಜನರಿಗೆ ಕೇಳಿಸುತ್ತದೆ ಎಂದರೆ ಸರಿಯಲ್ಲ. ಆರೋಪಿತರು ನಮ್ಮ ಮನೆಗೆ ಬಂದಾಗ ನನ್ನ ಸಹಾಯಕ್ಕೆ ಯಾರು ಬರಲಿಲ್ಲ. ನಮ್ಮ ಮನೆಯ ಬಳಿ ಯಾವುದಾದರೂ ಗಲಾಟೆ ಆಗಿದ್ದರೆ ಅಕ್ಕಪಕ್ಕದವರು ಬರುತ್ತಿದ್ದರು ಎಂದರೆ ಆ ಸಮಯ ಮದ್ಯಾಹ್ನ ಆಗಿದ್ದು ಯಾರು ಇರಲಿಲ್ಲ. ನಾನು ಸುಳ್ಳು ಹೇಳುತ್ತಿದ್ದೇನೆ, ನನ್ನ ಮನೆಯ ಬಳಿ ಯಾವುದೇ ಗಲಾಟೆ ಆಗಿರುವುದಿಲ್ಲ ಎಂದರೆ ಸರಿಯಲ್ಲ. ಅಂಭೇಡ್ಕರ್ ಭವನ ಕೆರಗೋಡಿನಿಂದ ಅಂಚಹಳ್ಳಿ ಕೆಬ್ಬಹಳ್ಳಿ ಮತ್ತು ಬಿಳಿದೇಗಲುವಿಗೆ ಹೋಗುವ ಮುಖ್ಯ ರಸ್ತೆಯಲ್ಲಿದೆ ಎಂದರೆ ಸರಿ ಅಲ್ಲಿ ಪ್ರತಿ ನಿಮಿಷಕ್ಕೆ 5 ರಿಂದ 6 ವಾಹನಗಳು ಓಡಾಡುತ್ತವೆ ಎಂದರೆ ಸರಿ. ಅಲ್ಲಿ ಚಾಸಾ- 1 ರವರಿಗೆ ಯಾವುದಾದರು ಹಲ್ಲೆಯಾಗಿದ್ದರೆ ನಮ್ಮ ಜನಾಂಗವಲ್ಲದ ಜನರು ಸಹಾಯಕ್ಕೆ ಬರುತ್ತಿದ್ದರು ಎಂದರೆ ಸರಿ. ಸಾಮಾನ್ಯವಾಗಿ ವ್ಯವಸಾಯದ ಕೆಲಸಕ್ಕೆ ಕೂಲಿಗೆ ಹೋಗುವವರು ಬೆಳಿಗ್ಗೆ 8.30 ಕ್ಕೆ ಹೋದರೆ ಸಂಜೆ 3 – 3.30 ಗೆ ವಾಪಸ್ಸು ಬರತ್ತಾರೆ ಎಂದರೆ ಸರಿ. ನಾನು ಬೆಳಿಗ್ಗೆ ಕುರಿ ಹೊಡೆದುಕೊಂಡು ಬೆಳಿಗ್ಗೆ 11.00 ಗಂಟೆಗೆ ಹೋದರೆ ಮುಸ್ಸಂಗೆ 6.00 – 6.30 ಗಂಟೆಗೆ ವಾಪಸ್ಸು ಬರುತ್ತೇನೆ ಎಂದರೆ ಸರಿ.

6. ಮಹಜರಿಗೆ ಬರುವ ವಿಚಾರವನ್ನು ನನಗೆ ಲಿಖಿತವಾಗಿ ತಿಳಿಸಿರುವುದಿಲ್ಲ. ಆ ದಿನ ಪೋಲೀಸರು ಅಲ್ಲಿಗೆ ಬರುವ ಮಾಹಿತಿ ನನಗೆ ಇರಲಿಲ್ಲ. ಮಹಜರ್ ಸಮಯ ಅಲ್ಲಿ ಸಾರ್ವಜನಿಕರು ಸುಮಾರು 4 – 5 ಜನರು ಇದ್ದರು. ಪೋಲೀಸರು ಅಕ್ಕಪಕ್ಕದ ಮನೆಯವರನ್ನು ವಿಚಾರಣೆ ಮಾಡಿರುತ್ತಾರೆ, ಆಗ ಅವರು ಅಲ್ಲಿ ಇದ್ದು ಗಲಾಟೆಯಾಗಿದ್ದ ಕಾರಣ ಹೋಗಿರುವುದಿಲ್ಲ ಎಂದು ಹೇಳಿದರು. ನಮ್ಮ ಜನಾಂಗದವರನ್ನು ಹೊರತುಪಡಿಸಿ ಅಲ್ಲಿಯ ಸ್ಥಳಿಕರನ್ನು ಮಹಜರಿಗಾಗಿ ಕರೆದಿರುತ್ತಾರೆ. ಅವರ ಹೆಸರು ನನಗೆ ಮರೆತು ಹೋಗಿದೆ. ತಿಮ್ಮಣ್ಣ ಎನ್ನುವವರನ್ನು ಕರೆದಿದ್ದರು. ನಮ್ಮ

ಮನೆಯ ಅಕ್ಕ ಪಕ್ಕದಲ್ಲಿ ತಿಮ್ಮಣ್ಣ ಎನ್ನುವವರು ಯಾರು ಇರುವುದಿಲ್ಲ ಎಂದರೆ ಸರಿಯಲ್ಲ. ಪೋಲೀಸರು ಸುಮಾರು ಕಾಲು ಗಂಟೆ ಅರ್ಧ ಗಂಟೆ ಇದ್ದರು. ಆ ಸಮಯ ಪೋಲೀಸರು ಅಲ್ಲಿ ನಮ್ಮನ್ನು ನಿಲ್ಲಿಸಿ ಪೋಟೋ ತೆಗೆದು ಹೋದರು. ನಮ್ಮ ಮನೆಯ ಬಳಿ ಪೋಲೀಸರು ಮಹಜರಿಗೆ ಬಂದಿರುವುದೇ ಇಲ್ಲ ಎಂದರೆ ಸರಿಯಲ್ಲ. ಯಾವುದೇ ಸಾರ್ವಜನಿಕರನ್ನುಅಲ್ಲಿಗೆ ಕರೆಸುವುದಾಗಲೀ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಈ ಪ್ರಕರಣಕ್ಕೆ ಅನುಕೂಲವಾಗುವಂತೆ ನಮ್ಮ ಸಂಬಂದಿಕರಾದ ಹುಡುಗರ ಸಹಿಯನ್ನು ಹಾಕಿಸಿರುತ್ತೇನೆ ಎಂದರೆ ಸರಿಯಲ್ಲ. ನಿಪಿ-1 ಮಹಜರನ್ನು ಠಾಣೆಯಲ್ಲಿ ಸೃಷ್ಟಿ ಮಾಡಿರುತ್ತದೆ ಎಂದರೆ ಸರಿಯಲ್ಲ.

7. ನ್ಯಾಯಾಲಯದ ಮುಂದಿರುವ ಆರೋಪಿತರು ಪರಿಚಯ ನನಗೆ ಮೊದಲಿನಿಂದಲು ಇದೆ. ಅವರು ಚಾಸಾ- 1 ರವರ ಸ್ನೇಹಿತರಾಗಿದ್ದರು. ಚಾಸಾ- 1 ರವರ ಜೊತೆ ಆರೋಪಿತರು ಓಡಾಡಿಕೊಂಡು ಇದ್ದರು ಎಂದರೆ ಅಲ್ಲಲ್ಲಿ ಗಲಾಟೆ ಮಾಡಿಕೊಳ್ಳುತ್ತಿದ್ದರು. ಸದರಿ ಗಲಾಟೆಯ ಬಗ್ಗೆ ಯಾವುದೇ ದೂರನ್ನು ಯಾರು ನೀಡಿರುವುದಿಲ್ಲ.

8. ಚಾಸಾ- 1 ರವರು 1ನೇ ಆರೋಪಿಯಿಂದ ಪಡೆದುಕೊಂಡು ರೂ.25,000/- ವಾಪಸ್ಸು 1ನೇ ಆರೋಪಿ ಕೇಳಿದಾಗ ಒಂದೊಂದು ಸಬೂಬು ಹೇಳುತ್ತಿದ್ದು ಸದರಿ ಹಣವನ್ನು ಕೊಡಲೇ ಬೇಕೆಂದು 1ನೇ ಆರೋಪಿ ಕೇಳಿದಾಗ ಜಾತಿ ನಿಂದನೆ ಸುಳ್ಳು ಕೇಸು ಕೊಟ್ಟರೆ ಸಾಲದ ಹಣವನ್ನು ವಾಪಸ್ಸು ಕೊಡಬೇಕಾಗುವುದಿಲ್ಲ ಎಂದು ನಾವೆಲ್ಲರೂ ಸೇರಿ ಈ ಸುಳ್ಳು ಪ್ರಕರಣವನ್ನು ನೀಡಿರುತ್ತೇವೆ ಎಂದರೆ ಸರಿಯಲ್ಲ. ಈ ರೀತಿ ಸುಳ್ಳು ಪ್ರಕರಣ ದಾಹಲಿಸಿದರೆ ಸರ್ಕಾರದಿಂದ ಪರಿಹಾರದ ಹಣ ಬರುತ್ತದೆ ಎಂದು ಸುಳ್ಳುದೂರನ್ನು ದಾಖಲಿಸಿರುತ್ತೇವೆ ಎಂದರೆ ಸರಿಯಲ್ಲ. ಆರೋಪಿತರು ಯಾವುದೇ ರೀತಿಯ ಹಲ್ಲೆಯನ್ನು ಮಾಡಿರುವುದಿಲ್ಲ, ನಮ್ಮ ಮನೆಯ ಮುಂದೆ ಬಂದು ಕೊಲೆ ಬೆದರಿಕೆ ಹಾಕಿರುವುದಿಲ್ಲ,ಜಾತಿ ನಿಂದನೆ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಈ ಪ್ರಕರಣದ ಸಾಕ್ಷಿಗಳೆಲ್ಲರು ನಮ್ಮ ಸಂಬಂದಿಕರು ಎಂದರೆ ಸರಿಯಲ್ಲ. ನನ್ನ ಮಗ 1ನೇ ಆರೋಪಿಗೆ ಕೊಡಬೇಕಾದ ಸಾಲದ ಹಣ ಕೊಡುವುದು ತಪ್ಪಿಸಲು ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ** ಇಲ್ಲ ಎಂದು ನುಡಿಯುತ್ತಾರೆ.

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿದೆ)

ಓದಿ ಹೇಳಿ ಕೇಳಿ ಸರಿ ಇದೆ ಎಂದು ಒಪ್ಪಿದೆ

**(ಮಂಜುಳಾ ಇಟ್ಟಿ)**
**5ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ**
**ನ್ಯಾಯಾಲಯ, ಮಂಡ್ಯ**